ಅ) ವರ್ಷ	ಅಪಘಾತಗಳು
1991–92	22,707
1992–93	24,167

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಪಘಾತಕ್ಕೀಡಾದ ವಾಹನಗಳ ವರ್ಷವಾರು ವಿವರಗಳನ್ನು ಈ ಕೆಳಗೆ ಕೊಟ್ಟಿದೆ.

ವರ್ಷ	ಅಪಘಾತಗಳ ಸಂಖ್ಯೆ
1991–92	2279
1992–93	2049

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮೇಲ್ಕಂಡ ಅಪಘಾತಗಳಲ್ಲಿ ಪರಿಹಾರ ಧನ ನೀಡಿಕೆಯ ಬಾಬ್ತಿನಿಂದಾಗಿ ಅನುಭವಿಸಿದ ನಷ್ಟದ ವಿವರ ಈ ಕೆಳಕಂಡಂತಿದೆ:

ವರ್ಷ	ಪರಿಹಾರ ನೀಡಿಕೆಯ ಮೊತ್ತ (ಲಕ್ಷ ರೂ.ಗಳಲ್ಲಿ)
1991–92	581.05
1992–93	352.06

(ಏಪ್ರಿಲ್ 92ರಿಂದ ಅಕ್ಟೋಬರ್ 92ರವರೆಗೆ)

ಬಸವಕಲ್ಯಾಣದಲ್ಲಿ ಗ್ರಾಮಾಂತರ ಪೋಲೀಸ್ ಠಾಣೆ

242 (480) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):-

ರಾಜ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಸವಕಲ್ಯಾಣ ತಾಲ್ಲೂಕಿಗೆ ಸೇರಿದ ಗ್ರಾಮಗಳಾದ ಗೊರಟಾ, ಮುಚ್ಚಳದ, ಕಿಟ್ಟಾ, ಧನುರಾ (ಕೆ) ಗೋಕುಳ್, ತೊಗಲೂರು, ಜಿನ್ನಾಪುರ, ಗಡಿರಾಯ ಹಳ್ಳಿ, ಖಾದ್‌ಪುರ, ಈ ಎಲ್ಲಾ ಗ್ರಾಮಗಳು ಭಾಲ್ಕಿ ತಾಲ್ಲೂಕು ಕಟಕಚುಂಚೋಳಿ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ಜನರಿಗೆ ತೊಂದರೆಯಾಗುತ್ತಿರುವ ವಿಚಾರ ತಿಳಿದಿದೆಯೇ;

ಇ) ಹಾಗಿದ್ದಲ್ಲಿ, ಈ ಎಲ್ಲಾ ಗ್ರಾಮಗಳನ್ನು ಭಾಲ್ಕಿ ತಾಲ್ಲೂಕು ಕಟಕಚುಂಚೋಳಿ ಪೊಲೀಸ್ ಠಾಣೆ ವ್ಯಾಪ್ತಿಯಿಂದ ಬೇರ್ಪಡಿಸಿ ಬಸವಕಲ್ಯಾಣ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಈ) ಹಾಗಿದ್ದಲ್ಲಿ ಎಂದಿನಿಂದ ಸೇರ್ಪಡಿಸಲಾಗುವುದು;

ಉ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು;

ಊ) ಬಸವಕಲ್ಯಾಣದಲ್ಲಿದ್ದಂತಹ ಪೊಲೀಸ್ ಠಾಣೆ ವ್ಯಾಪ್ತಿಯಿಂದ ಕಾನೂನನ್ನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಈ ಠಾಣೆಯ ವ್ಯಾಪ್ತಿಯಿಂದ ಬೇರ್ಪಡಿಸಿ ಗ್ರಾಮಾಂತರ ಪೊಲೀಸ್ ಠಾಣೆ ತೆರಯುವ ಸಂಭವ ಏನಾದರೂ ಇದೆಯೆ;

ೠ) ಇದ್ದಲ್ಲಿ, ಏಂದಿನಿಂದ ಗ್ರಾಮಾಂತರ ಪೊಲೀಸ್ ಠಾಣೆ ಆರಂಭಿಸಲಾಗುವುದು, ಇಲ್ಲದಿದ್ದಲ್ಲಿ ಆದಕ್ಕೆ ಕಾರಣವೇನು ?

ಶ್ರೀರಾಮನಾಥ ರೈ (ರಾಜ್ಯ ಗೃಹ ಸಚಿವರು):–

ಅ) ಹೌದು, ತೊಗಲೂರನ್ನು ಬಿಟ್ಟು

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಇಲ್ಲ

ಋ) ಇಲ್ಲ

ೠ) ಉದ್ಭವಿಸುವುದಿಲ್ಲ

ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಕೇಂದ್ರ ಗೃಹ ಸಚಿವರ ಹೇಳಿಕೆ

257 (312) ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):-

ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚೆಗೆ ಕೇಂದ್ರದ ಗೃಹ ಸಚಿವರು ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ಸಮಸ್ಯೆ ಬಗ್ಗೆ ಗೋವಾದಿಂದ ನೀಡಿದ ಹೇಳಿಕೆ ಸರಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅದರ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಹೌದು

ಆ) ಯಾವುದೇ ಕ್ರಮದ ಅಗತ್ಯವಿಲ್ಲ.

ಸಾರಾಯಿಯನ್ನು ಸ್ಯಾಚೆಟ್‌ನಲ್ಲಿ ಮಾರಾಟ ಮಾಡುವುದು

222 (774) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಮುಖ್ಯ ಮಂತ್ರಿಗಳು ಸಾರಾಯಿಯನ್ನು ಸ್ಯಾಚೆಟ್‌ಗಳಲ್ಲಿ ಮಾರಾಟ ಮಾಡುವುದನ್ನು ನಿಲ್ಲಿಸುವುದಾಗಿ ಆಶ್ವಾಸನೆ ಕೊಟ್ಟಿರುವ ವಿಷ ನಿಜವಲ್ಲವೇ;

2. ಹಾಗಿದ್ದಲ್ಲಿ, ಸ್ಯಾಚೆಟ್‌ನಲ್ಲಿ ಸಾರಾಯಿ ಮಾರಾಟ ನಿಂತಿರುವುದೇ;